ಇಲಾಖಾ ಪುನರ್ ರಚನೆಯ ಆದೇಶದ ಸಂ:ಎಹೆಚ್ 278 : ಎಎಂಎಲ್ 94 ದಿ : 31-5-95ರ ಪ್ರಕಾರ ಇನ್ನು ಮುಂದೆ ಕೃಷಿ ಸಹಾಯಕರ ನೇಮಕಾತಿಗೆ ಅವಕಾಶವಿರುವುದಿಲ್ಲ. ಈ ಹುದ್ದೆಗಳನ್ನು 2:1ರ ಅನುಪಾತದಲ್ಲಿ ಸಹಾಯಕ ಕೃಷಿ ಅಧಿಕಾರಿ ಹುದ್ದೆಗೆ ಪರಿವರ್ತನೆ ಮಾಡಿ, ಕೃಷಿ ಪದವೀಧರರನ್ನು ಆಯ್ಕೆ ಮೂಲಕ ಭರ್ತಿ ಮಾಡಲಾಗುತ್ತದೆ.

ಆ) ಇಲ್ಲಿಯವರೆಗೆ (ಫೀಲ್ಡ್ ಅಸಿಸ್ಟೆಂಟ್, ಫೀಲ್ಡ್‌ಮನ್ ಗ್ರಾಮಸೇವಕರು, ಕೃಷಿ ಸಹಾಯಕರು ಸೇರಿ) ಒಟ್ಟಾರೆ 9055 ಜನರನ್ನು ನೇಮಕ ಮಾಡಲಾಗಿರುತ್ತದೆ. ಕೃಷಿ ಸಹಾಯಕರುಗಳ ನೇಮಕಾತಿಗೆ ಎಸ್.ಎಸ್.ಎಲ್.ಸಿ. ಇಲ್ಲವೇ ತತ್ಸಮಾನ ವಿದ್ಯಾರ್ಹತೆ ಜೊಂದಿದ್ದು 2ವರ್ಷಗಳ ಸೇವಾ ಪೂರ್ವ ತರಬೇತಿಯನ್ನು ರಾಜ್ಯದ ಯಾವುದಾದರೊಂದು ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರದಲ್ಲಿ ಪೂರೈಸಬೇಕು.

ವಿಷಯ:- ರಾಜ್ಯದಲ್ಲಿನ ಸಹಕಾರಿ ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಹಣ ಸಂದಾಯದಲ್ಲಿ ವಿಳಂಬ.

1450 (1817) **ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):-** ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?.

ಆ) ರಾಜ್ಯದಲ್ಲಿರುವ ಬಹುತೇಕ ಸಹಕಾರಿ ಸಕ್ಕರೆ ಕಾರ್ಖಾನೆಗಳು 1994-95ನೇ ಸಾಲಿನ ಕಬ್ಬಿನ ಕಟಾವಿನ ಅಂತಿಮ ಬಿಲ್ಲನ್ನು ಇನ್ನೂವರೆಗೂ ಸಂದಾಯ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸಂದಾಯಮಾಡದೆ ಇರಲು ಕಾರಣಗಳೇನು?

ಆ) ನಿಗದಿತ ಅವಧಿಯಲ್ಲಿ ಸಂದಾಯಮಾಡದೇ ಇರುವ ಸಹಕಾರ ಸಕ್ಕರೆ ಕಾರ್ಖಾನೆಗಳ ವಿರುದ್ಧ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಉಮೇಶ್ ವಿ. ಕತ್ತಿ(ಸಕ್ಕರೆ ಸಚಿವರು):-

ಆ) ಬಂದಿದೆ. ಅಂತಿಮ ದರವನ್ನು ಪಾವತಿಸದಿರಲು ಮುಖ್ಯವಾಗಿ ಹಣಕಾಸಿನ ತೊಂದರೆ ಹಾಗೂ ಬಿಜಾಪುರ ಬೆಳಗಾವಿ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳು ಕಂತುಗಳಲ್ಲಿ ಕಬ್ಬಿನ ಬಿಲ್ಲನ್ನು ಆಯಾ ವರ್ಷದ ಲೆಕ್ಕ ತಪಾಸಣೆ ಮುಗಿದ ಮೇಲೆ ಪಾವತಿಸುವ ಪದ್ಧತಿ.

ಆ) 1994-95ನೇ ಸಾಲಿನ ಕಬ್ಬಿನ ಅಂತಿಮ ದರವನ್ನು ಪಾವತಿಸದಿರುವ ಸಕ್ಕರೆ ಕಾರ್ಖಾನೆಗಳಿಗೆ ಪಾವತಿಸುವಂತೆ ಈಗಾಗಲೇ ಸೂಚನೆ ನೀಡಲಾಗಿದೆ.

ವಿಷಯ:- ಬಗರ್ ಹುಕುಂ ಸಕ್ರಮ ಸಮಿತಿಗಳ ರಚನೆ.

1451 (1792) **ಶ್ರೀ ಕೆ. ಎಂ. ಕೃಷ್ಣಮೂರ್ತಿ (ಕಡೂರು):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?